

# ಮೊಗ್ಗಿನ ಮನಸು ಮಲ್ಲಿಕಾ ಕನಸು

**ಸಿವಿಲ್ ಎಂಜಿನಿಯರಿಂಗ್ ಓದಿ ನಟನೆಯತ್ತ ಹೊರಳಿರುವ ನಟಿ ಮಲ್ಲೈಕಾ ವಸುಪಾಲ್, 'ಉಪಾಧ್ಯಕ್ಷ' ಸಿನಿಮಾ ಮೂಲಕ ಚಂದನವನಕ್ಕೆ ಪದಾರ್ಪಣೆ ಮಾಡಿದ್ದಾರೆ. ಮೊದಲ ಸಿನಿಮಾ ಕೊಟ್ಟ ಅನುಭವವನ್ನು, ಸಿನಿಮಾ ಕುರಿತ ತಮ್ಮ ಕನಸುಗಳನ್ನು ಹಂಚಿಕೊಂಡಿದ್ದಾರೆ.**

**■ ಸುಮಲತಾ ಎನ್.**

ಯಾವಾಗಲೂ ಪಟಪಟನೆ ಮಾತನಾಡುವ, ತುಂಟು ನಗೆಯ, ಮುದ್ದು ಮುಖದ ಹುಡುಗಿಯಾಗಿ 'ಹಿಟ್ಲರ್ ಕಲ್ಯಾಣ' ಧಾರಾವಾಹಿಯಲ್ಲಿ ಗುರುತಿಸಿಕೊಂಡಿದ್ದ ನಟಿ ಮಲ್ಲೈಕಾ ಟಿ. ವಸುಪಾಲ್ ಚಂದನವನದಲ್ಲೂ ಅಂಥದ್ದೇ ಒಂದು ಐಡೆಂಟಿಟಿ ಸೃಷ್ಟಿಸಿಕೊಳ್ಳುವ ಪ್ರಯತ್ನದಲ್ಲಿರುವವರು.

ಈಚೆಗೆ ಬಿಡುಗಡೆಯಾದ, ಚಿಕ್ಕಣ್ಣ ನಾಯಕನಾಗಿ ನಟಿಸಿರುವ 'ಉಪಾಧ್ಯಕ್ಷ' ಸಿನಿಮಾದಲ್ಲಿ ನಾಯಕಿಯಾಗಿ ಮಿಂಚಿರುವ ಮಲ್ಲೈಕಾ, ಸಿನಿಮಾರಂಗದಲ್ಲಿ ತಮ್ಮ ಭವಿಷ್ಯದ ಕುರಿತು ಭರವಸೆ ತುಂಬಿಕೊಂಡವರು.

ದಾವಣಗೆರೆ ಹುಡುಗಿ ಮಲ್ಲೈಕಾ, ಸಿವಿಲ್ ಎಂಜಿನಿಯರಿಂಗ್ ಓದಿದವರು. ಆದರೆ ನಟಿಯಾಗಬೇಕು ಎಂಬ ಕನಸು ಅವರನ್ನು ನಟನೆಯತ್ತ ಹೊರಳಿಸಿತ್ತು.

'ನಟನೆ–ಸಿನಿಮಾ ಇವುಗಳ ಬಗ್ಗೆ ಏನೆಂದರೇನೂ ತಿಳಿದಿರಲಿಲ್ಲ. ಜೀವನದಲ್ಲಿ ಏನಾಗಬೇಕು ಎಂಬುದನ್ನು ಲೆಕ್ಕಾಚಾರ ಹಾಕುವ ಮುಂಚೆಯೇ, ಮನಸ್ಸಿನಲ್ಲಿ ಹೀರೊಯಿನ್ ಆಗಬೇಕು ಎಂಬ ಕನಸೇ ತುಂಬಿಕೊಂಡಿತ್ತು. ಅದು ಮಾತ್ರ ಮನಸ್ಸಿನಿಂದಾಚೆ ಹೋಗೇ ಇರಲಿಲ್ಲ. ಅಪ್ಪ ಅಮ್ಮನ ಆಸೆಯಂತೆ ಎಂಜಿನಿಯರಿಂಗ್ ಮುಗಿಸಿದೆ, ನನ್ನಾಸೆಯಂತೆ ನಟನೆಯತ್ತ ಬಂದೆ. ನನ್ನ ಕನಸು ಈಗ ನನಸಾಗಿದೆ...' ಎಂದು ಖುಷಿಯಿಂದ ತಮ್ಮ ಹಿನ್ನೆಲೆ ಪರಿಚಯಿಸುತ್ತಾರೆ ಮಲ್ಲೈಕಾ.

ನಟನೆಯ ಮೊದಲ ಬಾಗಿಲು ತೆರೆದಿದ್ದು ಅವರಿಗೆ ಕಿರುತೆರೆಯಲ್ಲಿ. 'ಹಿಟ್ಲರ್ ಕಲ್ಯಾಣ' ಧಾರಾವಾಹಿಯಲ್ಲಿ ಲವಲವಿಕೆಯ ಲೀಲಾ ಪಾತ್ರಕ್ಕೆ ಬಣ್ಣ ಹಚ್ಚಿದ ಅವರಿಗೆ ಆ ಅವಕಾಶವೇ ನಟನಾ ಪ್ರಪಂಚದ ಅನುಭವಗಳನ್ನು ತಂದುಕೊಟ್ಟಿತು.

'ಕ್ಯಾಮೆರಾ ನಿನ್ನ ಫ್ರೆಂಡ್ ಎಂದು ತಿಳಿದುಕೊ. ಸ್ನೇಹಿತರೊಂದಿಗೆ ಮಾತನಾಡಿದಂತೆ ಅದರೊಂದಿಗೆ ಮಾತನಾಡು. ಆಗ ಎಲ್ಲಾ ಸುಲಭ ಅನ್ನಿಸುತ್ತೆ' ಎಂಬ ಧಾರಾವಾಹಿ ನಿರ್ದೇಶಕರ ಮಾತು, ನಟನೆಯ ಬಗ್ಗೆ ಹೊಸ ಸುಳಿವನ್ನು ತಂದುಕೊಟ್ಟಿತ್ತು. 'ಈಗ ಆರಾಮಾಗಿ ಗಂಟೆಗಟ್ಟಲೆ ಕ್ಯಾಮೆರಾ ಮುಂದೆ ಮಾತಾಡಬಲ್ಲೆ. ಯಾರಿದ್ದರೂ ಚಿಂತೆಯಿಲ್ಲ' ಎಂದು ನಗುತ್ತಾರೆ ಮಲ್ಲೈಕಾ. ಸೀರಿಯಲ್‌ನಲ್ಲಿ ನಟಿಸಲು ಆರಂಭಿಸಿದ ಕೆಲವೇ ತಿಂಗಳಲ್ಲಿ ಸಿನಿಮಾ ಅವಕಾಶವೂ ಅವರನ್ನು ಅರಸಿ ಬಂತು.

'ಉಪಾಧ್ಯಕ್ಷ' ಸಿನಿಮಾಗೆ ಎಲ್ಲಾ ಸಿದ್ಧವಾಗಿದ್ದರೂ ಹೀರೊಯಿನ್ ಆಯ್ಕೆಯಾಗಿರಲಿಲ್ಲ. ಕೊನೆಗೆ ಆಡಿಷನ್ ಕೊಟ್ಟ ಮಲ್ಲೈಕಾಗೆ ಸಿನಿಮಾ ನಟಿ ಪಟ್ಟ ಒಲಿಯಿತು. ಆ ಪಾತ್ರವೂ ಅವರನ್ನು ಸೆಳೆದಿತ್ತು.

'ಮೊದಲ ಸಿನಿಮಾದಲ್ಲಿ ಇಂಥ ಪಾತ್ರ ಸಿಗೋದು ತುಂಬಾ ಕಷ್ಟ. ಇದು ನನ್ನ ಅದೃಷ್ಟ. ಬಜಾರಿ, ರೌಡಿ ಬೇಬಿ ಥರದ ಪಾತ್ರವದು. ಅಪ್ಪನ ಮುದ್ದಿನ ಮಗಳು, ಜೊತೆಗೆ ಸಿನಿಮಾ ಕ್ರೇಜ್ ಇರುವ ಹುಡುಗಿ' ಎಂದು ನಗುತ್ತಲೇ ತಮ್ಮ ಪಾತ್ರದ ವಿವರಣೆ ಕೊಟ್ಟರು ಅವರು. ತಮ್ಮ ಬಳಿಗೆ ಬಂದ ಒಳ್ಳೆಯ ಅವಕಾಶವನ್ನು ಕೈಚೆಲ್ಲಲು ಇಷ್ಟಪಡದವರು ಅವರು. ಈ ಕಾರಣಕ್ಕೇ ಧಾರಾವಾಹಿ, ಸಿನಿಮಾ ಎರಡರಲ್ಲೂ ತಮಗೆ ಬಂದ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುವ ಕಲೆಯನ್ನು ಕರಗತ ಮಾಡಿಕೊಳ್ಳುತ್ತಿರುವುದಾಗಿ ಹೇಳುತ್ತಾರೆ.

'ನಿರ್ದಿಷ್ಟವಾಗಿ ಇಂಥದ್ದೇ ಪಾತ್ರಗಳು ಬೇಕೆಂದು ನಾನು ಅಂದುಕೊಂಡಿಲ್ಲ. ನನ್ನ ಜೀವನದಲ್ಲಿ ಎಲ್ಲವೂ ತಂತಾನೇ ಆಗಿದೆ. ಅವಕಾಶಗಳೂ ತಂತಾನೇ ದೊರೆತಿವೆ. ಯಾವುದೇ ಪಾತ್ರವಿದ್ದರೂ ನಿಭಾಯಿಸುತ್ತೇನೆ. ಕಿರುತೆರೆ, ಹಿರಿತೆರೆ ಯಾವುದೇ ಆದರೂ ನನ್ನ ಪಾತ್ರ ಮುಖ್ಯ. ಜನಕ್ಕೆ ಇಷ್ಟವಾಗುವುದು ಮುಖ್ಯ' ಎನ್ನುತ್ತಲೇ 'ಮೊಗ್ಗಿನ ಮನಸ್ಸು' ಸಿನಿಮಾದಂಥ ಅವಕಾಶವೊಂದು ತಮಗೂ ಸಿಗಬೇಕು ಎಂಬ ಬಯಕೆಯನ್ನು ತೆರೆದಿಡುತ್ತಾರೆ.

'ಒಳ್ಳೆಯ ಪಾತ್ರಗಳನ್ನು, ಸಿನಿಮಾಗಳನ್ನು ಮಾಡಬೇಕು. ಹಲವು ನಟರ ಜೊತೆ ನಟಿಸಬೇಕು. ಒಂದೇ ಧಾರಾವಾಹಿಯಾದರೂ ಜನರು ನನ್ನನ್ನು ಗುರುತಿಸುತ್ತಿದ್ದಾರೆ. ಸಿನಿಮಾದಲ್ಲೂ ಅದನ್ನೇ ಬಯಸುತ್ತೇನೆ. ಚಂದನವನದಲ್ಲಿ ನನ್ನ ಹೊಸ ಅಧ್ಯಾಯ ಆರಂಭವಾಗಿದೆ. ಈ ಪಯಣ ಚೆನ್ನಾಗಿರುತ್ತದೆಂಬ ನಂಬಿಕೆಯಿದೆ' ಎಂದು ಆಶಾವಾದ ವ್ಯಕ್ತಪಡಿಸುತ್ತಾರೆ. ■